**ಓ ಎಸ್ ನಂಃ 54/2017**
**ಡಿ ಡಬ್ಲ್ಯೂ ಃ 2**

**ದಿಃ 02.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಸಿ ಕೆ ಆರ್ ವಕೀಲರಿಂದಃ-**

ನಿಡಿ 2 ರ ಕ್ರಯದ ಕರಾರು ಪತ್ರವನ್ನು ಟೈಪ್ ಮಾಡಿಸಿರುವ ಕಛೇರಿಯ ಹೆಸರು ನನಗೆ ಗೊತ್ತಿಲ್ಲ. ನಿಡಿ 2 ರ ದಾಖಲೆಯ ಛಾಪಾ ಕಾಗದವನ್ನು ಅರವಿಂದ್ (ಪ್ರತಿವಾದಿ 5) ರವರ ಹೆಸರಿನಲ್ಲಿ ತರುವಂತೆ ತಿಳಿಸಿರುತ್ತೇನೆ. ನಿಡಿ 2 ರ ದಾಖಲಾತಿಯ ಛಾಪಾ ಕಾಗದಗಳನ್ನು ನಾನು ನೋಡಿರುತ್ತೇನೆ. ಸದರಿ ಛಾಪಾ ಕಾಗದಗಳನ್ನು ತಾವರೆಕೆರೆಯ ಸೊಸೈಟಿಯಿಂದ ತಂದಿರುತ್ತಾರೆ. ಸದರಿ ಸೊಸೈಟಿಯ ಹೆಸರು ತಾವರೆಕೆರೆ ವ್ಯವಸಾಯ ಸಹಕಾರ ಸಂಘ. ತಾವರೆಕೆರೆ ವ್ಯವಸಾಯ ಸಹಕಾರ ಸಂಘದಿಂದ ತಾವರೆಕೆರೆಯ ನೋಂದಣಿ ಕಛೇರಿಗೆ 300 ಮೀಟರ್ ಅಂತರ ಇದೆ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ನೇರವಾಗಿ ಕ್ರಯ ಪತ್ರ ಬರೆದುಕೊಡಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಡಿ 2 ರ ಕ್ರಯದ ಕರಾರು ಪತ್ರವನ್ನು ತಯಾರು ಮಾಡುವ ಸಂದರ್ಭದಲ್ಲಿ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಕ್ರಯ ಪತ್ರಗಳನ್ನು ಪರಿಶೀಲನೆ ಮಾಡಿರುತ್ತೇನೆ. ನಿಡಿ 2ರ ಕ್ರಯದ ಕರಾರು ಪತ್ರವನ್ನು ತಯಾರು ಮಾಡುವ ಸಂದರ್ಭದಲ್ಲಿ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ನೋಡಿದ್ದೀರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಮೂಲ ಕ್ರಯ ಪತ್ರ ನರಸೇಗೌಡರವರ ಹೆಸರಿನಲ್ಲಿತ್ತು. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ 1 ನೇ ಪ್ರತಿವಾದಿಯ ಹೆಸರಿನಲ್ಲಿರುವ ಕ್ರಯಪತ್ರವನ್ನು ನಾನು ಪರಿಶೀಲನೆ ಮಾಡಿರುತ್ತೇನೆ. ದಾವಾ ಸ್ವತ್ತನ್ನು 1 ನೇ ಪ್ರತಿವಾದಿ ಯಾರಿಂದ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸಾಕ್ಷಿಯು ನರಸೇಗೌಡ ಮತ್ತು ಇತರರಿಂದ ಪಡೆದಿರುತ್ತಾರೆ. ಸದರಿ ಕ್ರಯ ಪತ್ರವನ್ನು 1 ನೇ ಪ್ರತಿವಾದಿ ನನಗೆ ನೀಡಿರುತ್ತಾರೆ. ನಿಡಿ 2 ಕ್ರಯದ ಕರಾರು ಪತ್ರವನ್ನು ತಯಾರಿಸಿದ ನಂತರ ಮಂಜುಳರವರು (1 ನೇ ಪ್ರತಿವಾದಿ) ನೀಡಿರುವ ಕ್ರಯ ಪತ್ರವನ್ನು ಯಾರಿಗೆ ಹಿಂತಿರುಗಿಸಿದ್ದೀರಿ ಎಂದರೆ ಸಾಕ್ಷಿಯು 5 ನೇ ಪ್ರತಿವಾದಿಗೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಿಡಿ 2 ಕ್ರಯದ ಕರಾರು ಪತ್ರವನ್ನು ತಯಾರು ಮಾಡುವ ಸಮಯದಲ್ಲಿ ಮಂಜುಳ, ಜಗದೀಶ, ನಾಗಶ್ರೀ, ಸಿದ್ದಗಂಗಯ್ಯ ಮತ್ತು ಟಿ ಎನ್ ನರಸಿಂಹಯ್ಯನವರು ಹಾಜರಿದ್ದರು. ನಿಡಿ 2 ರ ಕ್ರಯದ ಕರಾರು ಪತ್ರಕ್ಕೆ 3 ಪುಟಗಳಿಗೆ ನಾನು ಬೆರಳಚ್ಚು ಮಾಡಿಸಿರುತ್ತೇನೆ. ನಿಡಿ 2 ರ

ಕ್ರಯದ ಕರಾರು ಪತ್ರಕ್ಕೆ ಮಂಜುಳ, ಜಗದೀಶ, ನಾಗಶ್ರೀ ರವರು ಸಹಿಗಳನ್ನು ಮಾಡಿರುತ್ತಾರೆ. ಸದರಿ ರವರು ನಿಡಿ 2ರ ದಾಖಲಾತಿಗೆ 3 ಪುಟಗಳಿಗೆ ತಮ್ಮ ಸಹಿಗಳನ್ನು ಹಾಕಿರುತ್ತಾರೆ. 5 ನೇ ಪ್ರತಿವಾದಿಯು ನಿಡಿ 2 ರ ದಾಖಲಾತಿಯ ಎಷ್ಟು ಪುಟಗಳಿಗೆ ಅವರ ಸಹಿಗಳನ್ನು ಹಾಕಿರುತ್ತಾರೆ ಎಂದರೆ ಸಾಕ್ಷಿಯು 3 ಪುಟಗಳಿಗೆ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ 2 ರ ಕ್ರಯದ ಕರಾರು ಪತ್ರದ ಪ್ರಕಾರ ಸ್ವಾಧೀನವನ್ನು ಬಿಟ್ಟುಕೊಟ್ಟಿರುವುದಿಲ್ಲ. ನಿಡಿ 2 ರ ಕ್ರಯದ ಕರಾರು ಪತ್ರದಲ್ಲಿ ಕ್ರಯ ಪತ್ರವನ್ನು 6 ತಿಂಗಳ ಒಳಗಾಗಿ ಬರೆದುಕೊಡಬೇಕೆಂದು ಒಕ್ಕಣೆ ಇದೆ. ರೂ. 6,50,000/- ಉಳಿಕೆ ಹಣವನ್ನು ಪಡೆದುಕೊಂಡ ನಂತರ ಕ್ರಯ ಪತ್ರವನ್ನು ಬರೆದುಕೊಡಬೇಕೆಂದು ಒಕ್ಕಣೆ ಇದೆ. ನಿಡಿ 2 ರ ಕ್ರಯದ ಕರಾರು ಪತ್ರದಲ್ಲಿ ಕ್ರಯ ಪತ್ರ ಮಾಡುವ ಸಮಯದಲ್ಲಿ ಮೂಲ ಕ್ರಯ ಪತ್ರವನ್ನು 5 ನೇ ಪ್ರತಿವಾದಿಗೆ ಕೊಡಬೇಕೆಂದು ಬರೆಸಿದ್ದೀರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ತಾವರೆಕೆರೆಯ ಪಂಚಾಯತಿಗೆ ಒಳಪಟ್ಟಿರುತ್ತದೆ. ದಾವಾ ಸ್ವತ್ತಿನ ವಿಸ್ತೀರ್ಣದ ಬಗ್ಗೆ ತಮಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿ ಈಗ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಮನೆಯನ್ನು ಒಳಗೊಂಡಿರುತ್ತದೆ. ದಾವಾ ಸ್ವತ್ತಿನ ಮನೆಯ ಆರ್ ಸಿ ಸಿ ಛಾವಣಿಯ ಮನೆ. ನಿಡಿ 2ರ ಕ್ರಯ ಕರಾರು ಪತ್ರದ ಷೆಡ್ಯೂಲ್ ನಲ್ಲಿ ಆರ್ ಸಿ ಸಿ ಮನೆ ಎಂದು ನಮೂದು ಮಾಡಿದ್ದೀರ ಎಂದರೆ ಸಾಕ್ಷಿ ನನಗೆ ಈಗ ನೆನಪಿಲ್ಲ ಎಂದು ನುಡಿಯುತ್ತಾರೆ. 1 ರಿಂದ 3 ನೇ ಪ್ರತಿವಾದಿಗಳು ದಾವಾ ಸ್ವತ್ತನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಿರುವುದಿಲ್ಲ ಆದರೂ ಸಹ ತಾವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಈ ದಾವೆಯ 4 ನೇ ಪ್ರತಿವಾದಿಯ ಬಗ್ಗೆ ನನಗೆ ಗೊತ್ತಿಲ್ಲ. ನಿಡಿ 2ರ ಕ್ರಯದ ಕರಾರು ಪತ್ರವನ್ನು 5 ನೇ ಪ್ರತಿವಾದಿಯು ತಯಾರಿಸಿಕೊಂಡು ಬಂದಿರುತ್ತಾರೆ, ಸದರಿ ದಾಖಲಾತಿಗೆ ತಾವು ತಮ್ಮ ಸಹಿಯನ್ನು ಮಾತ್ರ ಹಾಕಿದ್ದು, ಸದರಿ ದಾಖಲಾತಿಯ ಬಗ್ಗೆ ತಮಗೆ ಏನು ಗೊತ್ತಿಲ್ಲ ಎಂದರೆ ಸರಿಯಲ್ಲ. ನಿಡಿ 2 ಕ್ರಯದ ಕರಾರು ಪತ್ರದಲ್ಲಿ ಕ್ರಯದ ನಿಷ್ಕರ್ಷ ರೂ. 18,00,000/- ಗೆ ನಮೂದು ಮಾಡಲಾಗಿದೆ. ಸದರಿ ಕ್ರಯದ ಕರಾರು ಪತ್ರ ಬರೆಯುವ ಕಾಲಕ್ಕೆ ಖರೀದಾರರು ಮಾರಾಟಗಾರರಿಗೆ ರೂ. 11,50,000/- ಹಣ ಮುಂಗಡವಾಗಿ ನೀಡಿರುತ್ತಾರೆ. ಸದರಿ ರೂ. 11,50,000/- ಹಣ ಪೈಕಿ ರೂ. 3,50,000/- ಹಣವನ್ನು ಚೆಕ್ಕುಗಳ ರೂಪದಲ್ಲಿ ಹಾಗೂ ರೂ. 8,00,000/- ಹಣವನ್ನು ನಗದು ರೂಪದಲ್ಲಿ ನೀಡಿರುತ್ತಾರೆ. ನನ್ನ

ಓ ಎಸ್ ನಂಃ 54/2017
ಡಿ ಡಬ್ಲ್ಯೂ ಃ 2

ಸಮಕ್ಷಮದಲ್ಲಿ ಮೇಲ್ಕಂಡ ರೂ. 8,00,000/- ಹಣವನ್ನು ಖರೀದಿದಾರರು ಮಾರಾಟಗಾರರಿಗೆ ನೀಡಿರುತ್ತಾರೆ. ಸದರಿ ರೂ. 8,00,000/- ಹಣವನ್ನು ರೂ. 1000/- ಹಾಗೂ 500/- ಮುಖಬೆಲೆಯ ನೋಟುಗಳಲ್ಲಿ ನೀಡಿರುತ್ತಾರೆ. ಸದರಿ ಹಣದಲ್ಲಿ 500/- ಮುಖಬೆಲೆಯ ನೋಟುಗಳು ಎಷ್ಟು ಹಾಗೂ 1000/- ರೂಪಾಯಿ ಮುಖಬೆಲೆಯ ನೋಟುಗಳು ಎಷ್ಟು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ. ರೂ. 3,50,000/- 2 ಚೆಕ್ಕುಗಳು 5 ನೇ ಪ್ರತಿವಾದಿಯ ಬ್ಯಾಂಕ್ ಖಾತೆಗೆ ಸೇರಿದ ಚೆಕ್ಕುಗಳು. ತಾವು ಹೇಳಿದ ಹಾಗೆ ರೂ. 18,00,000/- ಯಾವುದೇ ಕ್ರಯದ ಕರಾರು ಪತ್ರ ಆಗಿಲ್ಲದಿದ್ದರೂ ಸಹ ತಾವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಗಳು ವಾದಿಗೆ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಒಂದು ನೋದಾಯಿತ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟ ನಂತರ, 5 ನೇ ಪ್ರತಿವಾದಿ ಹಾಗೂ 1 ರಿಂದ 3 ನೇ ಪ್ರತಿವಾದಿಗಳು ಸೃಷ್ಟಿ ಮಾಡಿಕೊಂಡಿರುವ ಕ್ರಯದ ಕರಾರು ಪತ್ರಕ್ಕೆ ತಮ್ಮ ಸಹಿಯನ್ನು ಹಾಕಿದ್ದೀರಿ ಎಂದರೆ ಸರಿಯಲ್ಲ. ತಮಗೆ ನಿಡಿ 2ರ ಸಂಗತಿಗಳ ಬಗ್ಗೆ ಗೊತ್ತಿಲ್ಲದಿದ್ದರೂ ಸಹ ಸುಳ್ಳು ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**